ವಿಚಾರ ಲಹರಿ

# ಜಾತಿಯೆಂಬುದು ವಿಷದ ಬಾಣ

ದೆಹಲಿಯೆಂಬ ರಾಜಧಾನಿಯಲ್ಲಿ ಇತ್ತೀಚೆಗೆ ನಡೆದ ಒಂದು ಘಟನೆ: ಸುಮಿತ್ ಸಿಂಗ್ ಎಂಬ ದಲಿತ ವರ, ಶಾಂತಾ ಎಂಬ ವಧುವಿನ ಮನೆಗೆ ಸಂಪ್ರದಾಯದಂತೆ ಪಲ್ಲಕ್ಕಿ ಮೆರವಣಿಗೆಯಲ್ಲಿ (ಸ್ಥಳೀಯ ಭಾಷೆಯಲ್ಲಿ ಭಗ್ಗಿ) ಹೊರಟ. ಇದ್ದಕ್ಕಿದ್ದಂತೆ ಇಬ್ಬರು ಮೇಲ್ಜಾತಿ ಯುವಕರು ಬಂದು ಅವನನ್ನು ಭಗ್ಗಿಯಿಂದ ಕೆಳಗೆಳೆದು ಬೀಳಿಸಿ, ನೀನು ಪಲ್ಲಕ್ಕಿ ಮೆರವಣಿಗೆಗೆ ಅರ್ಹನಲ್ಲ, ಮೊದಲು ಮೋರಿ ಸ್ವಚ್ಛ ಮಾಡು, ನಂತರ ಹೋಗು ಎಂದು ಛೇಡಿಸಿದರು. ಮತ್ತೆರಡು ದಿನಗಳ ಅಂತರದಲ್ಲಿಯೆ ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯ ಹಳ್ಳಿಯೊಂದರಲ್ಲಿ ದಲಿತ ಮಹಿಳೆಯನ್ನು ಮಧ್ಯಾಹ್ನದ ಬಿಸಿಯೂಟದ ಅಡುಗೆ ಮಾಡಲು ನೇಮಿಸಿದ್ದಕ್ಕಾಗಿ ಹೆಡ್‌ಮಾಸ್ಟರ್ ರಹೀಮನನ್ನು ಚೆನ್ನಾಗಿ ಥಳಿಸಿದರು. ಮೇಲ್ಜಾತಿಯ ಮಕ್ಕಳನ್ನು ಊಟ ಮಾಡದಂತೆ ಅವರ ತಂದೆ ತಾಯಿಗಳು ತಡೆದರು. ಇಂಥ ನೂರಾರು ಘಟನೆಗಳು ದೇಶದಾದ್ಯಂತ ದಿನವೂ ನಡೆಯುತ್ತವೆ. ಪೋಲಿಸರ ಮಧ್ಯ ಪ್ರವೇಶದಿಂದ ಅಲಿಖಿತ ಸಂಧಾನವಾಗಿ ಉರಿ ತಾತ್ಕಾಲಿಕವಾಗಿ ಶಮನವಾಗುತ್ತದೆ. ಇವೆಲ್ಲವೂ ಧ್ವನಿಸುವುದಿಷ್ಟೆ. ಈ ದೇಶದಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಮೇಳು ಕೀಳಿನ ಜಾತಿ ಭೇದ ತಾಂಡವವಾಡುತ್ತಿದೆ.

ಮಜ್ಝಿಮನಿಕಾಯದ ಚೂಳಮಾಲುಂಕ್ಯಾಸುತ್ತದಲ್ಲಿ ಒಂದು ಕಥೆಯಿದೆ. ‘ಒಬ್ಬ ಪುರಷನಿಗೆ ಗಾಢವಾಗಿ ವಿಷ ಬಳಿದ ಬಾಣ ಚುಚ್ಚುತ್ತದೆ. ಅವನ ಮಿತ್ರರು ಬಾಣದ ಗಾಯಗಳನ್ನು ಬಲ್ಲ ವೈದ್ಯನನ್ನು ಕರೆತರುತ್ತಾರೆ. ಆಗ ಅವನು ನನ್ನನ್ನು ಹೊಡೆದವನು ಕ್ಷತ್ರಿಯನೆ, ಬ್ರಾಹ್ಮಣನೆ, ವೈಶ್ಯನೆ, ಶೂದ್ರನೆ? ಅವನ ಹೆಸರು ಗೋತ್ರಗಳೇನು? ಅವನು ಎತ್ತರವಾದವನೆ, ಕುಳ್ಳನೆ, ಅಥವಾ ಮಧ್ಯಮನೆ? ಅವನ ಬಣ್ಣ ಕಪ್ಪೆ, ಶ್ಯಾಮವರ್ಣವೆ, ಸುವರ್ಣವೆ? ಅವನು ಬಂದುದು ಯಾವ ಗ್ರಾಮ ನಗರಗಳಿಂದ? ಈ ಬಾಣದ ಕಾಂಡಕ್ಕೆ ಸುತ್ತಿರುವ ಸ್ನಾಯುವು ಗೋವಿನದೆ, ಮಹಿಷದ್ದೆ, ಕೋತಿಯದೆ? ಈ ಎಲ್ಲವೂ ನನಗೆ ತಿಳಿಯುವವರೆಗೆ ಬಾಣವನ್ನು ತೆಗೆಸುವುದಿಲ್ಲ ಎಂದು ಹೇಳಿದರೆ ಅದನ್ನು ತಿಳಿಸುವುದೊರಳಗೇ ಅವನು ಮರಣ ಹೊಂದುವನು. ಅದರಂತೆ ಮಾಲುಂಕ್ಯಾ ಪುತ್ರ! ಲೋಕ ಶಾಶ್ವತವೆ, ಅಶಾಶ್ವತವೆ? ಜೀವವೂ ಶರೀರವೂ ಒಂದೆಯೆ ಅಥವಾ ಬೇರೆಬೇರೆಯೆ? ತಥಾಗತನು ಸತ್ತನಂತರ ಇರುವನೆ ಅಥವಾ ಇಲ್ಲವೆ? ಇವುಗಳನ್ನು ವಿವರಿಸುವವರೆಗೆ ನಾನು ಭಗವಂತನನ್ನು ಅನುಸರಿಸುವುದಿಲ್ಲ ಎಂದು ಯಾವನಾದರೂ ಹೇಳಿದರೆ ವಿವರಣೆಯನ್ನು ಹೇಳುವುದರೊಳಗೇ ಪ್ರಾಣಿಯು ಮರಣಹೊಂದುವನು’.

ಹಸಿದವನಿಗೆ ಬೇಕಾದದ್ದು ಊಟ. ಅಡುಗೆ ಮಾಡಿದವರ ಗೋತ್ರವೇಕೆ ಎಂಬ ಪ್ರಶ್ನೆಗೆ ಐದು ಸಹಸ್ರಮಾನಗಳ ಹಿಂದೆಯೆ ಉತ್ತರ ಸಿಕ್ಕಿದೆ. ಆದರೂ ನಾವು ಪೂರ್ವಗ್ರಹಗಳನ್ನು ನಿವಾರಿಸಿಕೊಂಡಿಲ್ಲ. ಜಾತಿಯೆಂಬ ವಿಷದ ಬಾಣದಿಂದ ಸಮಾಜವು ಕೊಳೆಯುತ್ತದೆ ಎಂಬ ಸ್ಪಷ್ಟ ತಿಳುವಳಿಕೆ ಇರುವವರು ಇತರರನ್ನು ಎದುರು ಹಾಕಿಕೊಳ್ಳಲಾರದ ಅಸಹಾಯಕತೆಯಿಂದ ಜಾತಿಗೂಡಿನಿಂದ ಹೊರಗೆ ಹಾರಲಾರರು. ಅದನ್ನು ಸಮರ್ಥಿಸಿಕೊಳ್ಳುವವರಿಗಂತೂ ಯಾವ ವೈಜ್ಞಾನಿಕ ವಿಶ್ಲೇಷಣೆಯೂ ಬೇಕಾಗಿಲ್ಲ.

ಗಾಂಧೀಜಿ ಒಮ್ಮೆ ತಮ್ಮ ಆಶ್ರಮಕ್ಕೆ ದಲಿತ ದಂಪತಿಗಳನ್ನು ಬರಮಾಡಿಕೊಳ್ಳುತ್ತಾರೆ. ಅವರು ಬಂದ ಮೇಲೆ ಆತಂಕ ಶುರುವಾಗುತ್ತದೆ. ಅವರು ಶುದ್ಧವಾಗಿರುತ್ತಾರೆಯೆ, ನಿತ್ಯವೂ ಸ್ನಾನ ಮಾಡುತ್ತಾರೆಯೇ? ಇತ್ಯಾದಿ ಪ್ರಶ್ನೆಗಳನ್ನು ತಮ್ಮ ಸಹಚರರಲ್ಲಿ ಕೇಳುತ್ತಾರೆ. ಕೆಲವು ದಿನಗಳಲ್ಲಿಯೆ ಆಶ್ರಮದ ಆದಾಯ ಕುಗ್ಗುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಗಾಂಧಿ ತಾವೊಬ್ಬ ಮೇಲ್ಜಾತಿ ಹಿಂದುವಾಗಿ ತಮ್ಮೊಳಗಿನ ಜಾತಿಯನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಅದೊಂದು ಅಂತರಂಗ ಶುದ್ಧೀಕರಣದ ಪ್ರಕ್ರಿಯೆ. ಜಾತಿ ಪ್ರಶ್ನೆ ಬಂದಾಗ ಬೆಂಬಲಿಗರು ಮಹಾತ್ಮರಾದವರಿಗೂ ಸಹಕರಿಸುವುದಿಲ್ಲವೆಂಬುದನ್ನು ಕುಗ್ಗಿದ ಆದಾಯ ಹೇಳುತ್ತದೆ. ಅಸ್ಪೃಶ್ಯತೆಯನ್ನು ಕುರಿತ ಪರಿಣಾಮಕಾರಿ ಕಾದಂಬರಿ ‘ಚೋಮನದುಡಿ’ ಯನ್ನು ಬರೆದ ಶಿವರಾಮ ಕಾರಂತರು ಸಹ ಒಂದು ಕಡೆ ಬಹಿರಂಗದಲ್ಲಿ ನಾವೆಷ್ಟೇ ಹೇಳಿದರೂ ಅಸ್ಪೃಶ್ಯನೊಬ್ಬ ನನ್ನನ್ನು ಮುಟ್ಟಿದಾಗ ಚರ್ಮದ ಮೇಲೆ ಏನೋ ಸಂಚಾರವಾದಂತೆನಿಸುತ್ತದೆ ಎಂದು ಹೇಳಿದ್ದಾರೆ. ಪೂರ್ವಗ್ರಹದಿಂದ ಹೊರಬರಲು ಎಷ್ಟು ಕಷ್ಟ ಎಂಬುದನ್ನು ಇದು ಸೂಚಿಸುತ್ತದೆ.

ಅದು ಬಸವಣ್ಣನವರಿಗೆ ಮಾತ್ರ ಸಾಧ್ಯವಾಗಿತ್ತು. ಅವರ ಪ್ರಖ್ಯಾತ ವಚನವೊಂದರಲ್ಲಿ ‘ಅನ್ಯರಿಗೆ ಅಸಹ್ಯ ಪಡಬೇಡ’ ಎಂಬ ಸಾಲಿದೆ. ಅದು ಅಸ್ಪೃಶ್ಯತೆಯನ್ನು ಆಚರಿಸಬೇಡ ಎಂಬುದರ ಕಾವ್ಯಾತ್ಮಕ ಧ್ವನಿ. ‘ಇದಿರ ಹಳಿಯಲು ಬೇಡ’ ಎಂಬುದು ಜಾತಿಪದ್ಧತಿಯನ್ನು ಬಿಡು ಎಂದೇ ಅರ್ಥ. ‘ತನ್ನ ಬಣ್ಣಿಸಬೇಡ’ ಎಂದರೆ ನೀನು ನಿನ್ನಷ್ಟಕ್ಕೆ ಯಾವುದೇ ಕಾರಣಕ್ಕೂ ಹೆಚ್ಚಲ್ಲ ಎಂದು. ಮುಂದಿನ ಸಾಲುಗಳು ಇನ್ನೂ ಅರ್ಥಪೂರ್ಣವಾಗಿವೆ. ಇದೇ ಅಂತರಂಗದ ಶುದ್ಧಿ. ಇದೇ ಕೂಡಲಸಂಗಮನೊಲಿಯುವ ಪರಿ. ಈ ಬಗೆಯ ಅಂತರಂಗ ಶುದ್ಧಿಯಿಂದ ಮಾತ್ರ ದೇವರು ಒಲಿಯಲು ಸಾಧ್ಯ ಎನ್ನುತ್ತಾರೆ ಬಸವಣ್ಣ. ಸಾಮಾಜಿಕವನ್ನು ಆಧ್ಯಾತ್ಮಕರಿಸುವ ಅದ್ಭುತ ಪವಾಡವೇ ಜರುಗಿದೆ ಈ ವಚನದಲ್ಲಿ.

ನಮ್ಮ ಸಮಾಜಕ್ಕೆ ನಾಟಿದ ಜಾತಿಯೆಂಬ ವಿಷದ ಬಾಣ ಸಮಾಜವನ್ನು ಅಸ್ವಸ್ಥಗೊಳಿಸಿದೆ. ಬಹಿರಂಗದಲ್ಲಿ ಆರೋಗ್ಯಪೂರ್ಣವಾಗಿ ಕಾಣುವ ಸಮಾಜ ಒಳಗೆ ಈರ್ಷ್ಯೆ, ಅಸೂಯೆ, ದ್ವೇಷದ ನಂಜು ಕಾರುತ್ತಾ ನೆಮ್ಮದಿ ಶಾಂತಿಗಳನ್ನು ಹಾಳುಮಾಡಿಕೊಳ್ಳುತ್ತದೆ. ‘ಶಾಂತಿ ಜಗತ್ತಿನ ಎಲ್ಲಾದರೂ ನೆಲೆಸಬಹುದು, ಆದರೆ ಭಾರತದಲ್ಲಲ್ಲ’ ಎಂಬ ಇ. ಎಂ. ಫಾರ್‌ಸ್ಟರ್‌ನ ಮಾತು ನಿಜವೇನೋ ಅನಿಸುತ್ತಿದೆ. ಸಮಾನ ಅವಕಾಶಗಳು ಕಾನೂನು ಪುಸ್ತಕಗಳಲ್ಲಿ ಮಾತ್ರ ಇದ್ದರೆ ಸಮಾಜ ಸದೃಢವಾಗಿರಲು ಸಾಧ್ಯವಿಲ್ಲ.

■ ಮೂಚಿ

## ಮಾತೇ ಮುತ್ತು

★ ನಿಮ್ಮನ್ನು ನೀವೇ ಹಿಂದೆ ಹಾಕಬೇಕು, ಜೀವನ ಪರ್ಯಂತ ಅದೇ ನಿಮ್ಮ ಗುರಿಯಾಗಿರಬೇಕು.

-ಕ್ರಿಸ್ಟಿನಾ

★ ವೈದ್ಯನ ಎಡವಟ್ಟು ಹೂಳಲಾಗುತ್ತದೆ, ಎಂಜಿನಿಯರ್ ಎಡವಟ್ಟು ಒಂದು ಸ್ಮಾರಕವಾಗುತ್ತದೆ.

-ಡಬ್ಲ್ಯು. ಎಚ್.ಆಡೆನ್

★ ವಿವೇಕವನ್ನು ಕಳೆದುಕೊಂಡಿರುವವನು ಹುಚ್ಚನಲ್ಲ. ವಿವೇಕವೊಂದನ್ನು ಬಿಟ್ಟು ಎಲ್ಲವನ್ನೂ ಕಳೆದುಕೊಂಡಿರುವವನು ಹುಚ್ಚ.

-ಜಿ.ಕೆ.ಚೆಸ್ಟರ್‌ಟನ್

★ ನಾವು ಕಾಲವನ್ನು ಕಳೆಯುತ್ತೇವೆ ಅಲ್ಲ, ಕಾಲ ನಮ್ಮನ್ನು ಕಳೆಯುತ್ತದೆ!

-ಭರ್ತೃಹರಿ

★ ಸನ್ನಿವೇಶಗಳು ಮನುಷ್ಯನ ಹತೋಟಿಯಾಚೆ ಇವೆ. ಆದರೆ ಅವನ ನಡತೆ ಪೂರ್ತಿ ಅವನ ಸಾಮರ್ಥ್ಯದಲ್ಲೇ ಅಡಕವಾಗಿದೆ.

-ಬೆಂಜಮಿನ್ ಡಿಸ್ರೇಲಿ

★ ಅವನ ಬೆವರು ಆರುವ ಮುನ್ನವೇ ಅವನ ಕೂಲಿಯನ್ನು ಕೊಡು.

-ಕುರಾನ್

★ ಹಿಂದಕ್ಕೆ ಗುರುವಿದ್ದ, ಮುಂದಕ್ಕೆ ಗುರಿಯಿತ್ತು. ಸಾಗಿದುದು ಧೀರ ದಂಡು. ಹಿಂದಕ್ಕೆ ಗುರುವಿಲ್ಲ, ಮುಂದಕ್ಕೆ ಗುರಿಯಿಲ್ಲ. ಮುಗ್ಗುತಿದೆ ಹೇಡಿ ಹಿಂಡು.

-ಡಿ.ವಿ.ಗುಂಡಪ್ಪ

★ ಒಬ್ಬ ಮನುಷ್ಯ ಹೇಗೆ ಸತ್ತ ಎಂಬುದು ಮುಖ್ಯವಲ್ಲ, ಆದರೆ ಅವನು ಹೇಗೆ ಬದುಕಿದ್ದ ಎಂಬುದು ಮುಖ್ಯ.

-ಜಾನ್ ಡ್ರೈಡನ್

★ ಕಥನ ಶೈಲಿಯನ್ನು ಅನುಸರಿಸದೇ ಇರುವುದರಿಂದ ಭಾವಗೀತೆಯಲ್ಲಿ ರಸಾನುಭವ ಆಗುವುದಿಲ್ಲ. ಕತೆ ಕಟ್ಟುವ ಕಸಬುದಾರಿಕೆಯಿಂದಲೇ ಸಾಹಿತ್ಯ ಹೆಚ್ಚು ಆಪ್ತವಾಗುತ್ತದೆ.

-ಚಂದ್ರಶೇಖರ ಕಂಬಾರ

★ ಕ್ರೂರ ಶಕ್ತಿ ಎಂದೂ ಶಾಶ್ವತವಾದುದನ್ನು ಸಾಧಿಸಿಲ್ಲ.

-ನೆಪೋಲಿಯನ್